4033/5075/6035/7035

**VI Semester 3 Year LL.B./VIII Semester 5 Year B.A.LL.B. (Maj.-Min. System)/ B.B.A.LL.B./B.Com.LL.B. Examination, March/April 2023 (Dec. 2022)**

# LAW OF EVIDENCE

Duration : 3 Hours Max. Marks : 80

**Instructions :**
1. **Answer all five Units.**
2. **One essay type question and one short note/problem is compulsory from each Unit.**
3. **In each question Part (a) carries 10 marks and Part (b) carries 6 marks.**

## UNIT – I

Q. No. 1. (a) Explain the meaning and types of evidence. Marks : 10

ಸಾಕ್ಷ್ಯದ ಅರ್ಥ ಮತ್ತು ವಿಧಗಳನ್ನು ವಿವರಿಸಿ.

OR/ಅಥವಾ

(a) Explain the relevancy of facts showing occasion, cause or effects. Marks : 10

ಸಂದರ್ಭ, ಕಾರಣ ಅಥವಾ ಪರಿಣಾಮಗಳನ್ನು ತೋರಿಸುವ ಘಟನೆಗಳ ಸುಸಂಬದ್ಧತೆಯನ್ನು ವಿವರಿಸಿರಿ.

Q. No. 1. (b) 'A' is accused of killing his friend 'B'. Prosecution has adduced evidence to the effect that 'A' owed a huge amount of loan to 'B'. Is this evidence relevant ? Marks : 6

'ಅ' ನು ತನ್ನ ಸ್ನೇಹಿತ 'ಬ' ನನ್ನು ಕೊಲೆ ಮಾಡಿದ ಆರೋಪಿಯಾಗಿದ್ದಾನೆ. 'ಅ' ನು 'ಬ' ನಿಗೆ ಸಾಕಷ್ಟು ಮೊತ್ತದ ಸಾಲಕ್ಕೆ ಬಾಧ್ಯನಾಗಿದ್ದನೆಂಬ ಘಟನೆ ಕುರಿತಾಗಿ ಅಭಿಯೋಜನೆಯು ಸಾಕ್ಷ್ಯ ಸಲ್ಲಿಸಿದೆ. ಈ ಸಾಕ್ಷ್ಯವು ಸುಸಂಬದ್ಧವೇ ?

OR/ಅಥವಾ

(b) 'A' is accused of committing a crime at Belagavi on 02-02-2022 at 11 AM. But 'A' was not there is Belagavi on the said date as he went to participate in a reality show at Bengaluru. Can he prove it ? Marks : 6

ದಿನಾಂಕ 02-02-2022 ರಂದು ಬೆಳಗಿನ ಜಾವ 11 AM ಗಂಟೆಗೆ 'ಅ' ನು ಬೆಳಗಾವಿಯಲ್ಲಿ ಅಪರಾಧ ಮಾಡಿರುವ ಆರೋಪಿಯಾಗಿದ್ದಾನೆ. ಆದರೆ ಅದೇ ದಿವಸ ಅವನು ಬೆಳಗಾವಿಯಲ್ಲಿರಲಿಲ್ಲ ಮತ್ತು ಬೆಂಗಳೂರಿನಲ್ಲಿ ರಿಯಾಲಿಟಿ ಶೋದಲ್ಲಿ ಭಾಗಿಯಾಗಿದ್ದನು. ಇದನ್ನು ಆತ ರುಜುವಾತುಗೊಳಿಸಬಹುದೇ ?

P.T.O.

## UNIT – II

Q. No. 2. (a) Explain the general principles regarding relevancy of judgements. Marks : 10

ತೀರ್ಪುಗಳ ಸುಸಂಬದ್ಧತೆಗೆ ಸಂಬಂಧಿಸಿದ ಸಾಮಾನ್ಯ ತತ್ವಗಳನ್ನು ವಿವರಿಸಿರಿ.

OR/ಅಥವಾ

(a) Define confession and distinguish it from admissions. Marks : 10

ತಪ್ಪೊಪ್ಪಿಗೆಯನ್ನು ವ್ಯಾಖ್ಯಾನಿಸಿರಿ ಮತ್ತು ಇದನ್ನು ಒಪ್ಪುವಿಕೆಗಳಿಂದ ವ್ಯತ್ಯಾಸಿಸಿರಿ.

Q. No. 2. (b) 'A' sues 'B' for Rs. 1,000 and shows entries in his account books showing 'B' to be indebted to him to this amount. Are these entries sufficient and relevant to prove debt ? Marks : 6

'ಅ'ನು 1,000 ರೂಪಾಯಿಗಳಿಗಾಗಿ 'ಬ' ನ ವಿರುದ್ಧ ದಾವೆ ಹಾಕಿ ತನ್ನ ಖಾತಾ ಪುಸ್ತಕಗಳಲ್ಲಿ 'ಬ'ನು ತನಗೆ ಈ ಮೊತ್ತಕ್ಕೆ ಸಾಲಗಾರನಾಗಿರುವುದನ್ನು ದಾಖಲಿಸಿರುವುದನ್ನು ತೋರಿಸಿದ್ದಾನೆ. ಈ ದಾಖಲೆಗಳು ಸಾಲವನ್ನು ರುಜುವಾತು ಮಾಡಲು ಸಮಂಜಸ ಮತ್ತು ಸಮರ್ಪಕವೇ ?

OR/ಅಥವಾ

(b) A is accused of killing B by beating with a club. Eye witnesses testified to one blow upon the head of B but medical evidence has recorded four external injuries on his head. Which version is reliable by court ? Marks : 6

'ಅ' ನು 'ಬ' ನನ್ನು ಬಡಿಗೆಯಿಂದ ಹೊಡೆದು ಸಾಯಿಸಿದ ಆರೋಪಿಯಾಗಿದ್ದಾನೆ. ಪ್ರತ್ಯಕ್ಷ ಸಾಕ್ಷಿದಾರರು 'ಬ' ನ ತಲೆಗೆ ಒಂದು ಬಾಹ್ಯ ಪ್ರಹಾರವೆಂದು ಹೇಳಿದ್ದು ವೈದ್ಯಕೀಯ ಸಾಕ್ಷ್ಯವು ನಾಲ್ಕು ಬಾಹ್ಯ ಪ್ರಹಾರವೆಂದು ಹೇಳುತ್ತಿದೆ. ನ್ಯಾಯಾಲಯ ಯಾವುದನ್ನು ಅವಲಂಬಿಸಬಹುದು ?

## UNIT – III

Q. No. 3. (a) Explain the rule that oral evidence must in all cases be direct. State exceptions. Marks : 10

ಎಲ್ಲಾ ಸಂದರ್ಭಗಳಲ್ಲಿಯೂ ಮೌಖಿಕ ಸಾಕ್ಷ್ಯ ನೇರವಾಗಿರತಕ್ಕದ್ದು ಎಂಬ ನಿಯಮವನ್ನು ವಿವರಿಸಿರಿ. ಅಪವಾದಗಳನ್ನು ಹೇಳಿರಿ.

OR/ಅಥವಾ

(a) What is secondary evidence ? Explain the rules regarding the proof of attested documents. Marks : 10

ದ್ವಿತೀಯಕ ಸಾಕ್ಷ್ಯವೆಂದರೇನು ? ಅಭಿಪ್ರಮಾಣಕ್ಕೊಳಪಟ್ಟ ದಸ್ತಾವೇಜಿನ ರುಜುವಾತಿನ ನಿಯಮಗಳನ್ನು ವಿವರಿಸಿರಿ.

Q. No. 3. (b) Write a note on public documents. Marks : 6

ಸಾರ್ವಜನಿಕ ದಸ್ತಾವೇಜುಗಳ ಕುರಿತು ಟಿಪ್ಪಣಿ ಬರೆಯಿರಿ.

OR/ಅಥವಾ

(b) 'A' agrees in writing to pay Rs. 1,000 to 'B' on 01-03-2022. At the same time an oral agreement was made to the effect that the amount shall not be paid till 31-03-2022. Can this oral agreement be proved ? Marks : 6

'ಅ' ನು 'ಬ' ನಿಗೆ ದಿನಾಂಕ 01-03-2022 ರಂದು 1,000 ರೂಪಾಯಿಗಳನ್ನು ಕೊಡುವುದಾಗಿ ಬರವಣಿಗೆಯಲ್ಲಿ ಒಪ್ಪಿಕೊಂಡಿದ್ದಾನೆ. ಆದರೆ ಅದೇ ಸಮಯದಲ್ಲಿ ಮೌಖಿಕ ಒಪ್ಪಂದವಾಗಿದ್ದು ಅದರನ್ವಯ 31-03-2022 ರವರೆಗೆ ಆ ಹಣವನ್ನು 'ಬ' ನಿಗೆ ಕೊಡುವಂತಿಲ್ಲವೆಂದು ಒಪ್ಪಲಾಗಿದೆ. ಈ ಮೌಖಿಕ ಒಪ್ಪಂದವನ್ನು ರುಜುವಾತು ಪಡಿಸಬಹುದೇ ?

## UNIT – IV

Q. No. 4. (a) What is burden of proof ? On whom it lies ? Marks : 10

ರುಜುವಾತಿನ ಭಾರವೆಂದರೇನು ? ಇದು ಯಾರ ಮೇಲಿರುತ್ತದೆ ?

OR/ಅಥವಾ

(a) What is estoppel ? Explain the estoppel of tenants. Marks : 10

ಪ್ರತಿಬಂಧವೆಂದರೇನು ? ಗೇಣಿದಾರರ ಪ್ರತಿಬಂಧವನ್ನು ವಿವರಿಸಿರಿ.

Q. No. 4. (b) 'A' sues 'B' for money on a bond, but 'B' says that it was obtained by fraud. 'A' denies the fraud. On whom the burden of proof lies ? Marks : 6

'ಅ' ನು ಒಂದು ಬಾಂಡಿನನ್ವಯ ಹಣಕ್ಕಾಗಿ 'ಬ' ನ ಮೇಲೆ ದಾವೆ ಹಾಕಿದ್ದಾನೆ, ಆದರೆ 'ಬ' ನು ಈ ಬಾಂಡನ್ನು ಮೋಸದಿಂದ ಬರೆಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾನೆ. 'ಅ' ನು ಮೋಸವನ್ನು ಅಲ್ಲಗಳೆಯುತ್ತಾನೆ. ಯಾರ ಮೇಲೆ ರುಜುವಾತಿನ ಭಾರ ಇರುತ್ತದೆ ?

OR/ಅಥವಾ

(b) Write a note on presumptions. Marks : 6

ಪೂರ್ವಭಾವನೆಗಳ ಕುರಿತಾಗಿ ಟಿಪ್ಪಣಿ ಬರೆಯಿರಿ.

## UNIT – V

Q. No. 5. (a) Explain the provisions relating to protection of professional communications. Marks : 10

ವೃತ್ತಿಪರ ಸಂವಾದಗಳ ರಕ್ಷಣೆಗೆ ಸಂಬಂಧಿಸಿದ ಉಪಬಂಧಗಳನ್ನು ವಿವರಿಸಿರಿ.

OR/ಅಥವಾ

(a) Explain the order of examination of witnesses. Marks : 10

ಸಾಕ್ಷಿದಾರರ ವಿಚಾರಣೆ ಕ್ರಮಾಂಕವನ್ನು ವಿವರಿಸಿರಿ.

Q. No. 5. (b) A client says to his advocate that he wish to obtain a property by forged document. Is this communication protected from disclosure ? Marks : 6

ಒಬ್ಬ ಕಕ್ಷಿದಾರನು ಒಂದು ಮೋಸದ ದಾಖಿಲಾತಿಯಿಂದ ಸ್ವತ್ತೊಂದನ್ನು ಪಡೆದುಕೊಳ್ಳುವ ಇಂಗಿತವನ್ನು ತನ್ನ ವಕೀಲನಿಗೆ ಹೇಳಿದ್ದಾನೆ. ಈ ಸಂವಾದವು ಬಹಿರಂಗಗೊಳ್ಳುವಿಕೆಯಿಂದ ಮುಕ್ತವಾಗಿದೆಯೇ ?

OR/ಅಥವಾ

(b) Write a note on leading questions. Marks : 6

ಉತ್ತರ ಸೂಚಕ ಪ್ರಶ್ನೆಗಳ ಕುರಿತು ಟಿಪ್ಪಣಿ ಬರೆಯಿರಿ.

---